## ಕಬ್ಬನ್ನು ಬೆಳೆಸಲು ಸರ್ಕಾರ ಭೂಮಿ ಕೊಟ್ಟಿರುವುದು

೧೪೨೩. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಖಾಸಗಿ ಸಕ್ಕರೆ ಕಾರ್ಖಾನೆಯೊಂದಕ್ಕೆ ಸರ್ಕಾರ ಕಬ್ಬು ಬೆಳೆಸಲು ನೀರಾವರಿ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ನೀಡಿರುವುದು ನಿಜವೆ?

ಆ) ಗುತ್ತಿಗೆ ನೀಡಿದ್ದಲ್ಲಿ ಕಾರ್ಖಾನೆಯ ಹೆಸರು ಮತ್ತು ನೀಡಿದ ಭೂವಿಯ ವಿಸ್ತೀರ್ಣವೆಷ್ಟು?

ಇ) ಯಾವ ಶರತ್ತುಗಳ ಆಧಾರದ ಮೇಲೆ ಈ ಭೂಮಿಯನ್ನು ಗುತ್ತಿಗೆ ನೀಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೌದು

ಆ) ತುಂಗಭದ್ರ ಸಕ್ಕರೆ ಕಾರ್ಖಾನೆ, ವಿಸ್ತೀರ್ಣ ೫೦೦೦ ಎಕರೆಗಳು

ಇ) ಈ ಕೆಳಕಂಡ ಶರತ್ತುಗಳ ಆಧಾರದ ಮೇಲೆ ಭೂಮಿಯನ್ನು ಗುತ್ತಿಗೆಗೆ ನೀಡಲಾಗಿದ್ದಿತು.

೧) ಗುತ್ತಿಗೆ ಅವಧಿಯು ೩೦ ವರ್ಷಗಳು

೨) ಮೊದಲ ೫ ವರ್ಷಗಳಿಗೆ ವರ್ಷ ಒಂದಕ್ಕೆ ಒಂದು ಎಕರೆಗೆ ರೂ. ೫–೦೦
೬ನೇ ವರ್ಷಕ್ಕೆ ಎಕರೆ ಒಂದಕ್ಕೆ ವರ್ಷ ಒಂದಕ್ಕೆ ರೂ. ೫೦–೦೦
೭ನೇ ವರ್ಷಕ್ಕೆ ಎಕರೆ ಒಂದಕ್ಕೆ ವರ್ಷ ಒಂದಕ್ಕೆ ರೂ. ೬೦–೦೦
೮ನೇ ವರ್ಷಕ್ಕೆ ಎಕರೆ ಒಂದಕ್ಕೆ ವರ್ಷ ಒಂದಕ್ಕೆ ರೂ. ೮೦–೦೦
೯ನೇ ವರ್ಷಕ್ಕೆ ಎಕರೆ ಒಂದಕ್ಕೆ ವರ್ಷ ಒಂದಕ್ಕೆ ರೂ. ೯೦–೦೦
೧೦ನೇ ವರ್ಷಕ್ಕೆ ಎಕರೆ ಒಂದಕ್ಕೆ ವರ್ಷ ಒಂದಕ್ಕೆ ರೂ. ೯೦–೦೦
೧೧ನೇ ವರ್ಷ ಮತ್ತು ತದನಂತರ ವರ್ಷಗಳಿಗೆ
ಎಕರೆ ಒಂದಕ್ಕೆ ರೂ. ೧೦೦–೦೦

ಇದು ಮಾಮೂಲು ನೀರಿನ ತೆರಿಗೆ ದರ ಮತ್ತು ಎಲ್ಲಾ ತರಹದ ಸೆಸ್ ಮತ್ತು ಮಾಲ್ಕಿ ಮೌಲ್ಯವನ್ನು ಹೊರತುಪಡಿಸಿರುತ್ತದೆ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಈ ತುಂಗಭದ್ರ ಸಕ್ಕರೆ ಕಾರ್ಖಾನೆಗೆ ಸರ್ಕಾರಿ ಜಮೀನನ್ನು ಗುತ್ತಿಗೆ ಎಂದು ಕೊಡಲಾಯಿತು? ತುಂಗಭದ್ರ ಸಕ್ಕರೆ ಕಾರ್ಖಾನೆಯವರು ರೈತರಿಗೆ ೨ಕೋಟಿ ಹಣ ಬಾಕಿ ಮಾಡಿಕೊಂಡಿದ್ದಾರೆ ಎನ್ನುವುದು ನಿಜವೇ ? ಮತ್ತು ಈ ಭೂಮಿಯ ಒಡೆತನವನ್ನು ಮೈಸೂರು ಶುಗರ್ ಮಿಲ್ಸ್‌ಗೆ ಕೊಡುವುದನ್ನು ಬಿಟ್ಟು ಖಾಸಗಿ ಕಂಪನಿಗೆ ಕೊಡುವಂಥ ಔಚಿತ್ಯವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಗುತ್ತಿಗೆಯನ್ನು ೩೦ ವರ್ಷಗಳ ಹಿಂದೆ ಕೊಟ್ಟಿತು, ಈಗ ಅಲ್ಲ. ಆಗ ಯಾವ ಕಾರ್ಖಾನೆಗಳೂ ಇರಲಿಲ್ಲ. ಗುತ್ತಿಗೆಯ ಅವಧಿ ೩೦–೯–೧೯೮೭ಕ್ಕೆ ಮುಕ್ತಾಯವಾಯಿತು, ಈ ಜಮೀನನ್ನು ಕೇಳಿ ಪೇಪರ್ ಮಿಲ್‌ನವರು, ಸಕ್ಕರೆ ಕಾರ್ಖಾನೆಯವರು, ಕೃಷಿ ವಿಶ್ವವಿದ್ಯಾನಿಲಯದವರು, ಅರಣ್ಯ ಇಲಾಖೆಯವರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ ಮತ್ತು ಬೇರೆ ಕೆಲವರು ವೈಯಿಕ್ತಿಕವಾಗಿ ಜನರೂ ಕೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ,

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ದಿನಾಂಕ ೩೦–೯–೧೯೮೭ಕ್ಕೆ ಅವಧಿ ಮುಗಿದ ನಂತರವೂ ಇದು ಇನ್ನೂ ಮುಂದುವರಿಯುತ್ತಾ ಇರುವುದಕ್ಕೆ ಕಾರಣವೇನು ? ಇದನ್ನು ಮುಂದುವರಿಸುವಂಥ ಇಚ್ಛೆ ಸರ್ಕಾರಕ್ಕೆ ಇದೆಯೇ ? ಏಕೆಂದರೆ ರಾಜ್ಯದ ಸಂಪುಟದ ಸಚಿವರೋರ್ವರು ಆ ಸಕ್ಕರೆ ಕಾರ್ಖಾನೆ ಮಾಲೀಕರ ಜೊತೆ ಪ್ರವಾಸ ಮಾಡಿದ್ದಾರೆ ಎನ್ನುವಂಥ ಅಪಾದನೆ ಇದೆ. ಅದಕ್ಕೆ ಪೂರಕವಾಗಿ ಆ ಕಾರ್ಖಾನೆಯವರಿಗೇ ಪುನಃ ಕೊಡುವಂಥ ಇಚ್ಛೆ ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ. --ಪುನ: ಆ ಕಾರ್ಖಾನೆಗೆ ಕೊಡುವಂಥ ಇಚ್ಛೆ ಸರ್ಕಾರಕ್ಕೆ ಇಲ್ಲ. ಇದು ತಡವಾಗಲಿಕ್ಕೆ ಕಾರಣವೇನೆಂದರೆ, ಕೋರ್ಟಿಗೆ ಹೋಗಿದ್ದರು. ಸರ್ಕಾರದ ಮುಂದೆ ಅರ್ಜಿಗಳಿವೆ

ಅದನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ, ಕೈಗಾರಿಕಾ ಮಂತ್ರಿಗಳಾಗಲೀ, ಯಾವುದೇ ಮಂತ್ರಿಗಳಾಗಲೀ ಅವರ ಜೊತೆ ಪ್ರವಾಸ ಮಾಡಿದ್ದಾರೆ ಎನ್ನುವುದು ಸುಳ್ಳು, ಅದು ಸರಿಯಾದುದಲ್ಲ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಈಗ ಉತ್ತರದಲ್ಲಿ ಕೊಟ್ಟಿರುವಂತೆ ೧೧ನೇ ವರ್ಷ ಮತ್ತು ತದನಂತರದ ವರ್ಷಗಳಿಗೆ ಎಕರೆ ಒಂದಕ್ಕೆ ವರ್ಷ ಒಂದಕ್ಕೆ ೧೦೦ ರೂಪಾಯಿ ಪ್ರಕಾರ ಕೊಡಲಾಗಿರುತ್ತದೆ ಎಂದು ಇದೆ ಅಂದರೆ ೮೭ನೇ ಇಸವಿಗೆ ಅವಧಿ ಮುಗಿದಿದೆ. ೮೭ ರಿಂದ ಈಗ ೮೮ ಆಗುತ್ತಿದೆ ಕೋರ್ಟಿನಲ್ಲಿ ಎಷ್ಟು ವರ್ಷ ವಿಚಾರಣೆಯಾಗುತ್ತದೆ, ಎಷ್ಟು ವರ್ಷ ಅವರಿಗೆ ಅನುಕೂಲವಾಗುತ್ತದೆ ಅಷ್ಟಕ್ಕೆ ಎನು ಕ್ರಮ ತೆಗೆದುಕೊಂಡಿದ್ದೀರಿ ? ಕೋರ್ಟಿನಲ್ಲಿ ಈ ಕೇಸಿನ ಬಗ್ಗೆ ವಕಾಲತ್ತು ಕೊಟ್ಟಿದ್ದೀರಾ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ತಿಳಿದಮಟ್ಟಿಗೆ ಕೋರ್ಟಿನಲ್ಲಿ ನಮ್ಮ ಪರವಾಗಿ ಆಗಿದೆ ಕೋರ್ಟಿನಲ್ಲಿ ಅವರ ವಿರುದ್ಧ ನಿರ್ಣಯ ಕೊಟ್ಟಿದ್ದಾರೆ. ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತಾ ಇದೆ. ಆ ಭೂಮಿಯನ್ನು ಖಾಸಗಿಯವರಿಗೆ ಕೊಡಬೇಕೋ ಎಂ.ಪಿ.ಎಂ.ಗೆ ಕೊಡಬೇಕೋ ಎಂದು ನಿರ್ಣಯ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ಸರ್ಕಾರಿ ಒಡೆತನದಲ್ಲಿರುವಂಥ ಮೈಸೂರು ಶುಗರ್ ಮಿಲ್ಸ್‌ಗೆ ಕೊಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಹೇಳಿದ್ದೇನೆ. ಸರ್ಕಾರದ ಮುಂದೆ ಸರ್ಕಾರಿ ಕಾರ್ಖಾನೆಗಳ ಅರ್ಜಿಗಳು ಇವೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಮತ್ತು ಕೃಷಿ ವಿಶ್ವವಿದ್ಯಾನಿಲಯದ ಅರ್ಜಿಗಳಿವೆ. ಸರ್ಕಾರ ಎಲ್ಲವನ್ನೂ ಪರಿಶೀಲನೆ ಮಾಡುತ್ತಾ ಇದೆ. ಇದನ್ನು ಮುಂದುವರಿಸತಕ್ಕಂಥ ಇಚ್ಛೆ ಸರ್ಕಾರಕ್ಕೆ ಇಲ್ಲ.

( ಗೊಂದಲ )

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಗಲಾಟೆ ಮಾಡದೆ ಪ್ರಶ್ನೆಯನ್ನು ಕೇಳಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ಅವಧಿ ಮುಗಿದಿದೆ. ಇವತ್ತು ಜಮೀನನ್ನು ರೈತರಿಗೆ ಕೊಟ್ಟರೆ ಸರ್ಕಾರಕ್ಕೆ ೨ ಕೋಟಿ ರೂಪಾಯಿಗಳು ಉಳಿಯುತ್ತವೆ.

ಶ್ರೀ ಬಿ. ಸ್ವಾಮಿರಾವ್ —ಇದನ್ನು ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟವಿಚಾರ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಅವಧಿ ಮುಗಿದಿದ್ದರೂ ೮೭ ರಿಂದ ೮೮ರವರೆಗೆ ಕಾಯತಕ್ಕಂಥ ಪರಿಸ್ಥಿತಿ ಏತಕ್ಕೆ ಬಂತು.

ಶ್ರೀ ಗೋಪಾಲ ಮುಕುಂದ ಕಾನಡೆ.—೩೦ ವರ್ಷಗಳ ಅವಧಿ ಮುಗಿದ ಮೇಲೆ ರೈತರಿಗೆ ಕೊಡಿ ಹರಿಜನರಿಗೆ ಕೊಡಿ, ಅದನ್ನು ಬಿಟ್ಟು ಸಚಿವ ಸಂಪುಟದಲ್ಲಿ ಇರುವವರಿಗೆ ಏಕೆ ಕೊಡುತ್ತಿರಿ ? ಯಾವ ಗ್ಯಾರೆಂಟಿಯಾಗಿ ಕೊಡುತ್ತೀರಿ. ಇಲ್ಲ ನಿಮ್ಮ ಸಂಬಂಧಿಕರಿಗೆ ಕೊಡುತ್ತೀರಿ, ನಿಮ್ಮ ಎಲ್ಲಾ ವಿಚಾರಗಳೂ ಕೋರ್ಟಿನಲ್ಲಿ ಇವೆ.

ಅಧ್ಯಕ್ಷರು.—ಉತ್ತರ ಕೊಡುತ್ತಾರೆ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರಕ್ಕೆ ಈ ಕಾರ್ಖಾನೆಗೆ ಜಮೀನಿನ ಗುತ್ತಿಗೆಯನ್ನು ವಿಸ್ತರಿಸುವ ಇಚ್ಛೆಯಿಲ್ಲ. ಕೋರ್ಟಿನಲ್ಲಿ ಕೇಸು ನಮ್ಮ ಪರವಾಗಿ ತೀರ್ಮಾನವಾಗಿದೆ. ಕೃಷಿ ವಿಶ್ವವಿದ್ಯಾನಿಲಯ, ಅರಣ್ಯ ಇಲಾಖೆ. ಎಂ.ಪಿ.ಎಂ.ನವರೂ, ಸಕ್ಕರೆ ಕಾರ್ಖಾನೆಯವರು ಅರ್ಜಿಗಳನ್ನು ಹಾಕಿದ್ದಾರೆ. ಕೆಲವರು ವೈಯಕ್ತಿಕವಾಗಿ ಅರ್ಜಿಗಳನ್ನು ಹಾಕಿದ್ದಾರೆ. ಸರ್ಕಾರಕ್ಕೆ ಕಾರ್ಖಾನೆಗೆ ಗುತ್ತಿಗೆಯನ್ನು ವಿಸ್ತರಿಸುವ ಇಚ್ಛೆಯಿಲ್ಲ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ಈಗ ಭೂಮಿ ಯಾರ ಸ್ವಾಧೀನದಲ್ಲಿದೆ ?

ಅಧ್ಯಕ್ಷರು.—ಈ ವಿಚಾರವನ್ನು ಅರ್ಧತಾಸಿನ ಚರ್ಚೆಗೆ ಹಾಕಿ.